## 7

# “ಪರಲೋಕ ರಾಜ್ಯವು ಸಮೀಪಿಸಿತು”

*“ಅಂದಿನಿಂದ ಯೇಸು - ಪರಲೋಕರಾಜ್ಯವು ಸಮೀಪಿಸಿತು; ದೇವರಕಡೆಗೆ ತಿರುಗಿಕೊಳ್ಳಿರಿ ಎಂದು ಸಾರಿ ಹೇಳುವದಕ್ಕೆ ಪ್ರಾರಂಭಿಸಿದನು” (ಮತ್ತಾಯ 4:17).*

ಕೆಲವೊಂದು ಸಮಯಗಳಲ್ಲಿ ನಾನು ಎಂದೂ ಹೋಗದೆ ಇರುವ ಸ್ಥಳಗಳಿಗೆ ಸವಾರ್ತಾ ಕೂಟಗಳಿಗೆ ಹೋಗಬೇಕೆಂದು ನನಗೆ ಹೇಳಲ್ಪಡುತ್ತದೆ. ಈ ಸಂದರ್ಭಗಳಲ್ಲಿ ನಾನು ಸೇವೆಮಾಡಬೇಕಾಗಿರುವ ಸಹೋದರರ ಬಗ್ಗೆ ನನಗೆ ವೈಯಕ್ತಿಕ ಸಂಪರ್ಕವಿರುತ್ತಿರಲಿಲ್ಲ, ಆದುದರಿಂದ ಹೊಸ ಅನುಭವಗಳಲ್ಲಿಯೂ ಸಂಬಂಧಗಳಲ್ಲಿಯೂ ಸೇರುವವನಾಗಿದ್ದೆನು. ದೂರವಾಣಿಯಲ್ಲಿ ಸಭೆಯ ಯಾರೊಂದಿಗಾದರೂ ನಾನು ಮಾತಾಡಿದಂತೆ ಮತ್ತು ಕಾರ್ಯಕ್ರಮದ ಬಗ್ಗೆ ಪತ್ರಗಳನ್ನು ಓದುವಂತೆ, ನಾನು ನೋಡಲಿಕ್ಕಿದ್ದ ಹಾಗೂ ಆನಂದಿಸಲಿಕ್ಕಿದ್ದದ್ದರ ಬಗ್ಗೆ ಒಂದು ರೂಪವು ನನ್ನ ಮನಸ್ಸಿನಲ್ಲಿ ರೂಪಿಸಲ್ಪಡುತ್ತಿತ್ತು. ಕಾರ್ಯಕ್ರಮಗಳ ಸಮಯವು ಬಂದಾಗ ಮತ್ತು ಕೂಟದ ಸ್ಥಳಕ್ಕೆ ಬಂದಾಗ, ನಾನು ಕಂಡುಕೊಂಡದ್ದರ ಬಗ್ಗೆ ನಾನು ನಿರೀಕ್ಷಿಸಿದ್ದನ್ನು ಹೋಲಿಸುವುದು ಅತೀ ಆಸಕ್ತಿಯುಳ್ಳದ್ದಾಗುತ್ತಿತ್ತು. ಒಬ್ಬ ಸಹೋದರನು ಬಂದು ನನ್ನ ಕೈಕುಲುಕಿದಾಗ, “ನನ್ನೊಂದಿಗೆ ದೂರವಾಣಿಯಲ್ಲಿ ಮಾತಾಡುತ್ತಿದ್ದ ಮನುಷ್ಯನು ಇವನೇ ಆಗಿರಬೇಕು” ಎಂದು ನನ್ನಷ್ಟಕ್ಕೆ ನಾನೇ ಹೇಳಿಕೊಳ್ಳುವೆನು ಇಲ್ಲವೇ ಮಾತನಾಡಲಿಕ್ಕೆ ಸಮಯಕ್ಕಾಗಿ ಕಾದುಕೊಂಡಿರುವಾಗ, ನಾನು ಸುತ್ತಲೂ ನೋಡಿ, “ನೀನು ತಿಳಿದುಕೊಳ್ಳಲಿಕ್ಕೆ ಕುತೂಹಲನಾಗಿದ್ದ ಸಭೆಯು ಇದೇ” ಎಂದು ಗಮನಿಸುವೆನು.

ಇಂಥಹದೇ ಒಂದು, ಸಭೆಯೊಂದಿಗೆ ಪರಿಶುದ್ಧ ಬರಹಗಳಲ್ಲಿ ಸಂಭವಿಸುತ್ತದೆ. ದೇವರ ರಾಜ್ಯವು ಜೀವನದಲ್ಲಿ ಅದು ಚಿತ್ರಿಸಲ್ಪಡುವ ಮೊದಲು ಪ್ರವಾದನೆಯಲ್ಲಿ ಮುನೋಡಲ್ಪಟ್ಟಿರುತ್ತದೆ; ಅದು ಮೊದಲು ಹಳೇ ಮತ್ತು ಹೊಸ ಒಡಂಬಡಿಕೆಯ ವಿಷಯವಾಗಿದೆ, ಆಮೇಲೆ ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಅದು ಜೀವಿಸುವ, ಬಲವುಳ್ಳ ಮತ್ತು ಆತ್ಮಿಕ ದೇಹವಾಗಿರುತ್ತದೆ.

ಹೀಗೆ ಸಭೆಯು ಜಗತ್ತಿನೊಳಗೆ ಬರುವಂಥದ್ದು ತಪ್ಪಾದ, *ಅನಂತರ ಬಂದ* ವಿಚಾರವಾಗಿರುವುದಿಲ್ಲ, ಆದರೆ *ದೈವಿಕ ಮುಂಚಿತವಾದ ವಿಚಾರವಾಗಿದೆ.* ತಲುಪಲು ದೂರದಲ್ಲಿರುವ ಹಿಂದಿನ ನಿತ್ಯತ್ವದಲ್ಲಿ ದೇವರು ಮೊದಲೇ ನೋಡಿ ಸಿದ್ಧಪಡಿಸಿದ ಯೋಜನೆಯ ನೆರವೇರಿಕೆ ಅದಾಗಿತು.

ಪ್ರವಾದನೆಯ ಮೂರು ವಿಧಗಳು ಬೈಬಲಿನಲ್ಲಿ ಹರಡಿಕೊಂಡಿವೆ: ಹೆಸರಿನ ಪ್ರವಾದನೆ, ದ್ವಂದ್ವ ಪ್ರವಾದನೆ, ಮತ್ತು ಮುಂಗುರುತಾಗಿರುವ ಪ್ರವಾದನೆ.

*ಹೆಸರಿನ ಪ್ರವಾದನೆಯು,* ಇಲ್ಲವೇ ವಿವರವಾದ ಮುಂತಿಳಿಸುವಿಕೆಯು, ಮುಂತಿಳಿಸಲ್ಪಡುವ ಭವಿಷ್ಯದ ಘಟನೆಯೊಂದಿಗೆ ಸಂಬಂಧಿಸಿ ಪ್ರತ್ಯೇಕಿಸಲ್ಪಟ್ಟ ವಿಶೇಷ ವ್ಯಕ್ತಿ ಇಲ್ಲವೇ ಸ್ಥಳದ ಪ್ರವಾದನೆಯಾಗಿದೆ. ಉದಾಹರಣೆಯಾಗಿ, ಅರಸ ಯಾರೊಬ್ಬಾಮನು

ದೇವರ ನಿಯಮಕ್ಕೆ ಅವಿಧೇಯನಾಗಿ ತಾನು ಬೇತೇಲಿನಲ್ಲಿ ಸ್ಥಾಪಿಸಿದ ಯಜ್ಞವೇದಿಯ ಮೇಲೆ ಧೂಪಸುಡಲು ಸಿದ್ಧನಾಗುತ್ತಿದ್ದಾಗ ಹೆಸರು ಹೇಳದ ಪ್ರವಾದಿಯು ಅವನೊಂದಿಗೆ ಮಾತಾಡಿದನು, ಯಾರೊಬ್ಬಾಮನ ಗದರಿಸುವಿಕೆಯಲ್ಲಿ, ಪ್ರವಾದಿಯು, ಯೋಷೀಯನು ಒಂದು ದಿನ ಯಾರೊಬ್ಬಾಮನ ಯಜ್ಞವೇದಿಯ ಮೇಲೆ ಮಾನವ ಎಲುಬುಗಳನ್ನು ಸುಡುವದರಿಂದ ಹೊಲೆಮಾಡುವನು ಎಂದು ಹೇಳಿದನು. ದಕ್ಷಿಣದ ಒಳ್ಳೆಯ ಅರಸರಲ್ಲಿ ಒಬ್ಬನಾದ ಯೋಷೀಯನ ಸುಧಾರಣೆಗಳ ದಿನಗಳಲ್ಲಿ, ಮುನ್ನೂರು ವರ್ಷಗಳ ನಂತರ ಪ್ರವಾದನೆಯು ನೆರವೇರಿತು (2 ಅರಸುಗಳು 23:20).

ಹೆಸರಿನ ಪ್ರವಾದನೆಯ ಇನ್ನೊಂದು ಉದಾಹರಣೆಯು, ಯೆಶಾಯ 44:28ರಲ್ಲಿ, ಪರ್ಶಿಯದ ಅರಸ ಕೋರೆಷನು, ಅವನು ಯೆಶಾಯನಿಂದ ಹೆಸರಿನಿಂದ ಹೇಳಲ್ಪಟ್ಟನು - ಸುಮಾರು 150 ವರ್ಷಗಳ ಮೊದಲು ಯೆಶಾಯನು ಜೀವಿಸಿದ್ದನು. ಕೋರೆಷನು ಯೆಹೂದ್ಯರನ್ನು ತಮ್ಮ ದೇಶಕ್ಕೆ ಮರಳಿಹೋಗಲು ಅಪ್ಪಣೆ ಕೊಡುವನು ಮತ್ತು ಬಬಿಲೋನಿನ ಸೆರೆಯವಾಸದ ನಂತರ ಅವರು ಯೆರೂಸಲೇಮನ್ನು ಪುನಃ ಕಟ್ಟುವರು (ಯೆಶಾಯ 44:28; ಹೋಲಿಸು ಎಜ್ರ 1:1-3). ಹೆಸರಿನ ಪ್ರವಾದನೆಗಳು ಸಾಮಾನ್ಯವಾಗಿ ಸ್ಪಷ್ಟವಾಗಿದ್ದು, ಸುಲಭವಾಗಿ ಗುರುತಿಸಲ್ಪಡುವವು.

ಪ್ರವಾದನೆಯ ಎರಡನೆಯ ವಿಧವು, ದ್ವಂದ್ವ ಪ್ರವಾದನೆಯು, ಅದು ಹೇಳಲ್ಪಟ್ಟ *ದಿನಕ್ಕೆ* ಒಂದು ಅನ್ವಯವು ಮತ್ತು ಎರಡನೆಯ ಅನ್ವಯವು ಭವಿಷ್ಯದಲ್ಲಿ *ಇನ್ನೊಂದು ದಿನಕ್ಕಾಗಿ* ಇರುವಂಥದ್ದಾಗಿದೆ. ಪ್ರವಾದನೆಗೆ ಎರಡು ಅರ್ಥಗಳಿರುವವು - ಒಂದು ಇಂದಿಗಾಗಿ ಮತ್ತು ಇನ್ನೊಂದು ಭವಿಷ್ಯಕ್ಕಾಗಿ ಎಂದು ಬೇರೆ ಮಾತಿನಲ್ಲಿ ಹೇಳಬಹುದು. ಯೇಸುವಿನ ಕನ್ಯಾಜನನವನ್ನು ಕುರಿತ ಪ್ರಸಿದ್ಧ ಯೆಶಾಯ 7:14ರ ವಾಕ್ಯಭಾಗವು ದ್ವಂದ್ವ ಪ್ರವಾದನೆಯಾಗಿದೆಯೆಂದು ಯೋಚಿಸಲ್ಪಟ್ಟಿದೆ. ಅದು ಆಹಾಜನಿಗೆ ಅವನ ವೈರಿಗಳಾದ ರೇಜಿನ್ ಮತ್ತು ಪೆಹಾ ಸಮಯದ ಸ್ವಲ್ಪೇ ಅವದಿಯಲ್ಲಿ ಮರೆಯಾಗಿ ಹೋಗುವವರು ಎಂಬ ಪ್ರೋತ್ಸಾಹಕರವಾದ ಸುದ್ಧಿಯನ್ನು ಪ್ರಕಟಿಸಿತು; ಅದು ಯೇಸುವಿನ ಕನ್ಯಾಜನನದ ಅದ್ಭುತಕರವಾದ ಭವಿಷ್ಯತ್ತಿನಲ್ಲಿಯ ಒಂದು ದಿನವನ್ನು ಮುಂತಿಳಿಸಿತು. ಮತ್ತಾಯನು ಪ್ರವಾದನೆಯ ಆ ಭಾಗದ ಪ್ರೇರೇಪಿತ ವ್ಯಾಕ್ಯಾನವನ್ನು ಕೊಡುತ್ತಾನೆ. ಅದು ಕನ್ನಿಕೆಯಿಂದ ಜನನವನ್ನು ವಿವರಿಸಿತು (ಮತ್ತಾಯ 1:23).

ಪ್ರವಾದನೆಯ ಮೂರನೆಯ ವಿಧಾನವು ಸಾಂಕೇತಿಕ ಪ್ರವಾದನೆಯಾಗಿದೆ, ಒಂದು ರೀತಿಯಲ್ಲಿ ಭವಿಷ್ಯದ ಘಟನೆಯನ್ನು ಇಲ್ಲವೇ ಪರಿಸ್ಥಿತಿಯನ್ನು *ಮುಂತಿಳಿಸುವ* ಒಂದು ಪ್ರವಾದನೆಯಾಗಿದೆ. ಉದಾಹರಣೆಯಾಗಿ, ಹೆರೋದನ ಕೋಪದಿಂದ ತಪ್ಪಿಸಿಕೊಳ್ಳಲು ಯೋಸೇಫನು ಮರಿಯಳನ್ನೂ ಶಿಶುವಾದ ಯೇಸುವನ್ನೂ ತೆಗೆದುಕೊಂಡು ಐಗುಪ್ತಕ್ಕೆ ಹೋದನು. ಅವರು ಐಗುಪ್ತದಿಂದ ನಜರೇತಿಗೆ ಹಿಂದಿರುಗಿದ್ದು ಸಾಂಕೇತಿಕ ಪ್ರವಾದನೆಯನ್ನು ನೆರವೇರಿಸಿತು. ಪ್ರವಾದನೆಯ ಈ ಅರ್ಥದ ಬಗ್ಗೆ ನಮಗೆ ನಿಶ್ಚಿತತೆಯಿರುವುದು, ಯಾಕಂದರೆ ಮಾತ್ತಾಯನು ಐಗುಪ್ತದಿಂದ ಅವರು ಹಿಂದಿರುಗಿದ್ದರ ಬಗ್ಗೆ ಹೀಗೆ ಹೇಳಿದನು, “ಇದರಿಂದ - ನನ್ನ ಮಗನನ್ನು ಐಗುಪ್ತದೇಶದೊಳಗಿಂದ ಕರೆದೆನೆಂದು ಕರ್ತನು ಪ್ರವಾದಿಯ ಮುಖಾಂತರ ಹೇಳಿದ ಮಾತು ನೆರ ವೇರಿತು” (ಮತ್ತಾಯ 2:15). ಮತ್ತಾಯನು ಉಲ್ಲೇಖಿಸಿದ ಹಳೇ ಒಡಂಬಡಿಕೆಯ ವಾಕ್ಯ ಭಾಗವು ಹೋಶೇಯ 11:1 ಆಗಿರುತ್ತದೆ, ಐಗುಪ್ತದ ಗುಲಾಮಗಿರಿಯೊಳಗಿಂದ ತನ್ನ ಜನಾಂಗವನ್ನು ಯೆಹೋವನು ಹೊರತರುವುದಕ್ಕೆ ಅದು ಸೂಚನೆಯಾಗಿರುತ್ತದೆ, ಹೀಗೆ ಇಸ್ರಾಯೇಲು ಐಗುಪ್ತದ ಸೆರೆಯೊಳಗಿಂದ ಹೊರಗೆ ಬರುವಂಥದ್ದು ಒಂದು ವಿಧವಾಗಿದೆ ಇಲ್ಲವೇ ಕ್ರಿಸ್ತ ಶಿಶುವು ಐಗುಪ್ತದಿಂದ ಹೊರಗೆ ಬರುವ ಹೆಚ್ಚು ದೊಡ್ಡದಾದ ಘಟನೆಯ ಮುನ್ಸೂಚನೆಯಾಗಿದೆ

- ಇದನ್ನು ನಾವು ಪ್ರತಿ ಸಂಕೇತ ಎಂದು ಹೇಳಬಹುದು. ಸಾಂಕೇತಿಕ ಪ್ರವಾದನೆಗಳು ಅಸ್ಪಷ್ಟವಾಗಿವೆ ಮತ್ತು ಅವುಗಳ ಗುರುತಿಸುವಿಕೆಗಾಗಿಯೂ ವಿವರಣೆಗಾಗಿಯೂ ಅವುಗಳ ಮೇಲಿನ ಪ್ರೇರೇಪಿತ ವ್ಯಾಖ್ಯಾನಗಳ ಮೇಲೆ ಹೆಚ್ಚಾಗಿ ಅವಲಂಬಿಸಬೇಕಾಗಿರುತ್ತದೆ.

ದೇವರ ರಾಜ್ಯವನ್ನು ಕುರಿತು ಇಲ್ಲವೇ ಸಭೆಯನ್ನು ಕುರಿತು - ಅವುಗಳಲ್ಲಿ ಹೆಚ್ಚಾದವುಗಳು ನಿರ್ದಿಷ್ಟವಾದವುಗಳಾಗಿವೆ - ಯೇಸುವು ಹೇಳಿದ ಪ್ರತ್ಯೇಕವಾದ ಪ್ರವಾದನೆಗಳ ಬಗ್ಗೆ ಯೋಚಿಸೋಣ. ಯೇಸುವು ನಮ್ಮ ಅರಸನು ಮತ್ತು ಮಹಾ ಯಾಜಕನು, ಆದರೆ ಆತನು ದೇವರ ಪ್ರವಾದಿಯೂ ಸಹ ಆಗಿದ್ದಾನೆ. "ನಿಮ್ಮ ದೇವರಾದ ಯೆಹೋವನು ನಿಮ್ಮ ಸಹೋದರರಲ್ಲಿ ನನ್ನಂಥ ಪ್ರವಾದಿಯನ್ನು (ನಿಮಗೆ) ಏರ್ಪಡಿಸುವನು" ಎಂದು ಮೋಶೆ ಹೇಳಿದನು (ಧರ್ಮೋಪದೇಶಕಾಂಡ 18:15). ಮೋಶೆಯ ಈ ಪ್ರವಾದನೆಯನ್ನು ಅಪೋಸ್ತಲರ ಕೃತ್ಯಗಳು 3:18-23ರಲ್ಲಿ ಯೇಸುವಿಗೆ ಸಂಬಂಧಿಸಿದೆಯೆಂದು ಪೇತ್ರನು ವ್ಯಾಖ್ಯಾನಿಸಿದನು. ಇಬ್ರಿಯರಿಗೆ ಬರೆದ ಪತ್ರಿಕೆಯ ಬರಹಗಾರನೂ ಯೇಸುವಿನ ಬಗ್ಗೆ ಹೀಗೆ ಹೇಳಿದನು, "ಪುರಾತನ ಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗಭಾಗವಾಗಿಯೂ ವಿಧವಿಧವಾಗಿಯೂ ಮಾತಾಡಿದ ದೇವರು ಈ ಅಂತ್ಯದಿನಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ ..." (ಇಬ್ರಿಯ 1:1, 2).

ದೇವರ ಪ್ರವಾದಿಯಂತೆ, ಯೇಸುವು ಸಭೆಯ ಬಗ್ಗೆ ಇಲ್ಲವೇ ಬರಲಿಕ್ಕಿದ್ದ ರಾಜ್ಯದ ಬಗ್ಗೆ ಹಲವಾರು ಮುಂತಿಳಿಸುವಿಕೆಗಳನ್ನು ಹೇಳಿದನು. ಹಳೇ ಒಡಂಬಡಿಕೆಯ ಯುಗದ ಪ್ರವಾದನೆಗಳಂತೆ, ಆತನ ಪ್ರಕಟನೆಗಳು, ಯಾವುದೇ ಹೊಸ ಒಡಂಬಡಿಕೆಯ ಮತ್ತು ಇತಿಹಾಸದ ವಿದ್ಯಾರ್ಥಿಯು ಗಮನಿಸುವಂತೆ ನೆರವೇರಿದವು. ಸಭೆಯ ಬಗ್ಗೆ ಯೇಸುವು ಹೇಳಿದ ಮುಂತಿಳಿಸುವಿಕೆಗಳ ಮೇಲೆ ಪ್ರತಿಬಿಂಬಿಸುವುದು ರಾಜ್ಯದ ಪ್ರಾರಂಭದ ಸಮಯದ ಹಾಗೂ ಸ್ವಭಾವದ ತೀರ್ಮಾನಿಸುವಿಕೆಯಲ್ಲಿ ವಿಶೇಷವಾಗಿ ಬೋಧನಾತ್ಮಕವಾದದ್ದಾಗಿದೆ.

## ಬೇಗನೇ ಬರುವುದು

ದೇವರ ರಾಜ್ಯವು ಬೇಗನೇ ಬರುವುದೆಂದು ಯೇಸುವು ಮುಂತಿಳಿಸಿದನು, ಅದು ಸಮೀಪದಲ್ಲಿರುವುದು, "ಹತ್ತಿರದಲ್ಲಿತ್ತು." "ಕೈಯಲ್ಲಿ" ಇರಲಿಲ್ಲ. ಇಲ್ಲವೇ ವರ್ತಮಾನದಲ್ಲಿ ಇರಲಿಲ್ಲ, ಆದರೆ ಅದು "ಹತ್ತಿರದಲ್ಲಿತ್ತು" ಇಲ್ಲವೇ ಸಮೀಪಿಸುತ್ತಲಿತ್ತು. ಅದರ ಸ್ಥಾಪನೆಯ ಸಮಯವು, ನಾವು ಕೆಲವು ಸಲ ಹೇಳುವಂತೆ, "ಇಲ್ಲಿಯೇ ಇದೆ" ಇಲ್ಲವೇ "ಬಹಳ ದೂರದಲ್ಲಿ ಇರುವದಿಲ್ಲ" ಆಗಿತ್ತು.

ದೇವರ ರಾಜ್ಯವು "ಸಮೀಪಿಸಿದ್ದರಿಂದ" ಜನರು ದೇವರ ಕಡೆಗೆ ತಿರುಗಿಕೊಳ್ಳ ಬೇಕೆಂದು ಪ್ರಸಂಗಿಸು, ಯೇಸುವಿನ ಸೇವೆಗಾಗಿ ಸ್ನಾನಿಕನಾದ ಯೋಹಾನನು ಮಾರ್ಗವನ್ನು ಸಿದ್ಧಪಡಿಸಿದನು. "ಆ ದಿನಗಳಲ್ಲಿ ಸ್ನಾನಿಕನಾದ ಯೋಹಾನನು - ಪರಲೋಕ ರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರಿಗಿಕೊಳ್ಳಿರಿ ಎಂದು ಯೂದಾಯದ ಅಡವಿಯಲ್ಲಿ ಸಾರಿ ಹೇಳುತ್ತಾ ಬಂದನು" (ಮತ್ತಾಯ 3:1, 2) ಎಂದು ಯೋಹಾನನ ಬಗ್ಗೆ ಮತ್ತಾಯನು ಹೇಳಿದನು.

ತನ್ನ ಬಾಪ್ತಿಸ್ಮ ಮತ್ತು ಶೋಧನೆಗಳ ನಂತರ, ಯೇಸುವು ಯೋಹಾನನು ಪ್ರಸಂಗಿಸಿದ ಅದೇ ಸಂದೇಶವನ್ನು, ದೇವರ ರಾಜ್ಯದ ಸಮೀಪತೆಯನ್ನು ಪ್ರಸಂಗಿಸುತ್ತ ತನ್ನ ಭೂಲೋಕದ ಸೇವೆಯನ್ನು ಪ್ರಾರಂಭಿಸಿದನು. "ಅಂದಿನಿಂದ ಯೇಸು - ಪರಲೋಕರಾಜ್ಯವು ಸಮೀಪಿಸಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಸಾರಿ

ಹೇಳುವದಕ್ಕೆ ಪ್ರಾರಂಭಿಸಿದನು" (ಮತ್ತಾಯ 4:17) ಎಂದು ಆತನ ಬಗ್ಗೆ ಮತ್ತಾಯನು ಬರೆದನು. ಯೇಸುವು ಹನ್ನೆರಡು ಜನ ಅಪೊಸ್ತಲರನ್ನು ಮಿತಿಯುಳ್ಳ ಆದೇಶವನ್ನು ನೆರವೇರಿಸಲು ಕಳುಹಿಸಿದಂತೆ, ಆತನು ಅವರಿಗೆ, "ಪರಲೋಕರಾಜ್ಯವು ಸಮೀಪವಾಯಿತೆಂದು ಸಾರಿಹೇಳುತ್ತಾ ಹೋಗಿರಿ" (ಮತ್ತಾಯ 10:7) ಎಂದು ಹೇಳಿದನು.

---

*ದೇವರ ರಾಜ್ಯವು ಸಮಯದ*
*ಅಂತ್ಯದಿನದಲ್ಲಿ ಬರಲಿಕ್ಕಿತ್ತು ಎಂದು*
*ಯೇಸುವು ಪ್ರಸಂಗಿಸಲಿಲ್ಲ,*
*ಆದರೆ ತನ್ನ ಸೇವೆಯ ನಂತರ*
*ಸ್ವಲ್ಪ ಸಮಯದಲ್ಲಿ ಅದು ಬರಲಿಕ್ಕಿದೆ*
*ಎಂದು ಪ್ರಸಂಗಿಸಿದನು.*

---

"ದೇವರ ರಾಜ್ಯದ ಬಗೆಗಿನ ಆತನ ಇತರ ಕೆಲವು ವ್ಯಾಖ್ಯಾನಗಳಲ್ಲಿ, ಪರಲೋಕ ರಾಜ್ಯವು ಆತನ ಸೇವೆಯ ಕಾಲದಲ್ಲಿಯೇ ಇತ್ತು ಎಂದು ಯೇಸುವು ಸೂಚಿಸುವಂತೆ ಕಾಣುವುದಿಲ್ಲವೇ? ಈ ಉಲ್ಲೇಖಗಳು 'ಸಮೀಪವಾಗಿದೆ' ಎಂಬ ಆತನ ಮುಂತಿಳಿಸುವಿಕೆಗಳಿಗೆ ವಿರೋಧವಾಗಿರುವುದಿಲ್ಲವೇ?" ಎಂದು ಕೆಲವರು ಪ್ರಶ್ನಿಸಬಹುದು. ಅದು ಒಂದು ಒಳ್ಳೆಯ ಪ್ರಶ್ನೆ. ಹಾಗೆ ವ್ಯಾಖ್ಯಾನಿಸಲ್ಪಡಬಹುದಾದ ಆತನ ಹೇಳಿಕೆಗಳಲ್ಲಿ ಎರಡು, ಮತ್ತಾಯ 11:12 ಮತ್ತು ಮತ್ತಾಯ 12:28 ಆಗಿರುತ್ತವೆ: "ಇದಲ್ಲದೆ ಸ್ನಾನಿಕನಾದ ಯೋಹಾನನ ಕಾಲದಿಂದ ಈ ವರೆಗೂ ಪರಲೋಕ ರಾಜ್ಯವು ಬಲಾತ್ಕಾರಕ್ಕೆ ಗುರಿಯಾಗಿರುತ್ತದೆ; ಬಲಾತ್ಕಾರಿಗಳು ನುಗ್ಗಿ ಅದನ್ನು ಸ್ವಾಧೀನ ಮಾಡಿಕೊಳ್ಳುತ್ತಾರೆ" (ಮತ್ತಾಯ 11:12); "ನಾನು ದೇವರ ಆತ್ಮನ ಬಲದಿಂದಲೇ ದೆವ್ವಗಳನ್ನು ಬಿಡಿಸುವದಾದರೆ ದೇವರ ರಾಜ್ಯವು ನಿಮ್ಮ ಹತ್ತಿರಕ್ಕೆ ಬಂತಲ್ಲಾ" (ಮತ್ತಾಯ 12:28).

11:12ನ್ನು ಹೆಚ್ಚು ನಿಕಟವಾಗಿ ಓದುವಾಗ, ಯೇಸುವು ರಾಜ್ಯವು ಬರುವದರ ಬಗ್ಗೆ ಕೇಳಿಸಿಕೊಂಡ ಹಾಗೂ ತಮ್ಮವೇಳಾಪತ್ರಿಕೆಯಲ್ಲಿ, ದೇವರ ವೇಳಾಪತ್ರಿಕೆಯಲ್ಲಿ ಅಲ್ಲ, "ಅದು ಕೂಡಲೇ ಬರುವಂತೆ ಮಾಡಲು" ಬಯಸುವ ಜನರ ಬಗ್ಗೆ ಮಾತಾಡುತ್ತಿದ್ದನೆಂದು ತೋರುತ್ತದೆ, ರಾಜ್ಯವು ಬಂದಿದೆಯೆಂದು ಯೇಸುವು ಹೇಳಲಿಲ್ಲ, ಆದರೆ ತಪ್ಪಾಗಿ ನಡಿಸಲ್ಪಟ್ಟ, ಅತ್ಯಭಿಮಾನಿಗಳಾಗಿದ್ದ ಜನರು, ದೇವರು ಅದನ್ನು ತರುವುದನ್ನು ಅಯ್ಕೆಮಾಡಿಕೊಳ್ಳುವ ಮೊದಲು ಮುಂಚಿತವಾಗಿಯೇ ಅದರಲ್ಲಿ ಓಡಿಹೋಗಲು ಪ್ರಯತ್ನಿಸಿದರು. ತನ್ನ ಸಮಯಕ್ಕಿಂತ ಮೊದಲು ಪಾತರಗಿತ್ತಿಯು ಕೂಡಲೇ ಹುಟ್ಟಿ ಬರುವಂತೆ ರೇಷಿಮೆ ಹುಳದ ಗೂಡನ್ನು ಒಡೆಯುವ ಚಿಕ್ಕಮಕ್ಕಳಿಗೆ ಅವರನ್ನು ಹೋಲಿಸಬಹುದು.

12:28ರಲ್ಲಿ ಯೇಸುವು ತಾನು ಹೊರಗೆ ಹಾಕಿದ ದೆವ್ವದ ಬಗ್ಗೆ ಉಲ್ಲೇಖಿಸುತ್ತಿದ್ದಾನೆ, ಅದಕ್ಕಾಗಿ ಆತನು ಬೆಲ್ಜೆಬೂಬನ ಬಲದಿಂದ ಗುಣಪಡಿಸುತ್ತಿರುವನೆಂದು ದೂರಲ್ಪಟ್ಟನು, ಈ ದೂರಿಗೆ ಯೇಸುವು ತಾನು ಈ ಅದ್ಭುತಕಾರ್ಯವನ್ನು ದೇವರ ಬಲದಿಂದ ಮಾಡಿರುವೆನೆಂದೂ ಹೀಗೆ ತಾನು ದೈವಿಕನಾಗಿದ್ದಾನೆಂದೂ ತೋರಿಸುವುದರಿಂದ ಉತ್ತರ ಕೊಟ್ಟನು. ಅವರ ಮಧ್ಯದಲ್ಲಿ ದೇವರ ಕುಮಾರನ "ಪ್ರಸನ್ನತೆಯು" ಈ ಭೂಲೋಕದ ಮೇಲೆ ದೇವರ ರಾಜ್ಯದ ಪ್ರವೇಶಿಸಲು ಪ್ರಾರಂಭಿಸಿದೆ ಎಂದರ್ಥ ಕೊಡುತ್ತದೆ. ರಾಜ್ಯದ ಇನ್ನೂ ಬಂದಿರುವುದಿಲ್ಲ, ಆದರೆ ಅವರ ಮಧ್ಯದಲ್ಲಿ ದೇವರ ಕುಮಾರನ ಪ್ರಸನ್ನತೆಯ ಮುಖಾಂತರ ಬರಲಿಕ್ಕಿದ್ದ ರಾಜ್ಯದ ಅರಸನು ತಲುಪುವ ಹಂತದಲ್ಲಿದ್ದಾನೆ.

ಬೈಬಲಿನ ವ್ಯಾಖ್ಯಾನದ ಅಗತ್ಯವಾದ ನಿಯಮವು ಸ್ಪಷ್ಟವಾದ ವಾಕ್ಯಭಾಗಗ

ಳನ್ನು ಅಸ್ಪಷ್ಟವಾದವುಗಳನ್ನು ವಿವರಿಸಲು ಬಿಡುವುದಾಗಿದೆ. ಯೋಹಾನನ ಮತ್ತು ಯೇಸುವಿನ ಪ್ರಸಂಗದಲ್ಲಿಯ "ಹತ್ತಿರವಾಗಿದೆ" ಎಂಬ ಮಾತು ರಾಜ್ಯದ ಬರುವಿಕೆಯ ಸಮಯವನ್ನು ಕುರಿತು ನಿರ್ದಿಷ್ಟವಾದ ಸಂಕೇತವನ್ನು ಕೊಡುವಂತೆ ನೋಡಲಾಗಿದೆ. ಅದು ದೇವರ ಸಮಯದ ಹಾದಿಯನ್ನು ಕುರಿತು ಎರಡು ಸತ್ಯಗಳನ್ನು ಸ್ಥಾಪಿಸುತ್ತದೆ: ಮೊದಲನೆಯದು, ಅವರು ಪ್ರಸಂಗಿಸುತ್ತಿದ್ದ ಸಮಯದಲ್ಲಿ ರಾಜ್ಯವು *ಇನ್ನೂ ಬಂದಿರಲಿಲ್ಲ,* ಆದರೆ ಇನ್ನೂ ಭವಿಷ್ಯದಲ್ಲಿತ್ತು; ಎರಡನೆಯದು, ರಾಜ್ಯವು *ಬೇಗನೇ* ಬರಲಿದೆ - ಅದರ ಬರೋಣವು *ಕೂಡಲೇ* ಇತ್ತು. ಈ ಸತ್ಯಗಳು ಮಹತ್ವವಿಲ್ಲದ ವಿವರಗಳೂ, ನಮಗೆ ಯೋಚಿಸಲು ಅಯೋಗ್ಯವಾದವುಗಳೂ ಆಗಿರುವುದಿಲ್ಲ. ಯೇಸುವು *ಸಮಯದ ಅಂತ್ಯದಲ್ಲಿ* ರಾಜ್ಯವು ಬರಲಿದೆ ಎಂದು ಪ್ರಸಂಗಿಸಲಿಲ್ಲ, ಆದರೆ ತನ್ನ ಸೇವೆಯ ಸ್ವಲ್ಪ *ಸಮಯದ ನಂತರ* ಸಮಯದಲ್ಲಿ ಬರಲಿಕ್ಕಿತ್ತು ಎಂದು ಪ್ರಸಂಗಿಸಿದನೆಂಬ ಬಹಳ ಮಹತ್ವದ ಪಾಠವನ್ನು ಅವು ನಮಗೆ ಕಲಿಸುತ್ತವೆ. ರಾಜ್ಯದ ಈಗ ಇಲ್ಲವೇ ಹಾಗೂ ನಮಗಾಗಿ ಭವಿಷ್ಯದ ನಿರೀಕ್ಷೆಯಾಗಿರುವುದಿಲ್ಲ ಎಂಬ ಮಾತು ಅನ್ವಯಿಸುವುದಕ್ಕಾಗಿ ನಾವು ಆನಂದಪಡಬಹುದು.

ನಮ್ಮ ಮಕ್ಕಳು ಚಿಕ್ಕವರಾಗಿದ್ದಾಗ, ಅವರು ಹೊಂದಿಕೊಳ್ಳಲು ನಿರೀಕ್ಷಿಸುತ್ತಿದ್ದ ಬೊಂಬೆ ಇಲ್ಲವೇ ಇತರ ವಸ್ತುಗಳನ್ನು ಕೊಂಡುಕೊಳ್ಳುವುದಕ್ಕಾಗಿ ಒಂದು ಅಂಗಡಿಗೆ ಅವರನ್ನು ಕರೆದುಕೊಂಡು ಹೋಗುವೆವೆಂದು ಆಗಾಗ ಒಪ್ಪಿಕೊಳ್ಳುತ್ತಿದ್ದೆವು. ಜನ್ಮ ದಿನಕ್ಕಾಗಿ ಇಲ್ಲವೇ ಇತರ ಸಂದರ್ಭಗಳಿಗಾಗಿ ಉಡುಗೊರೆಗಳನ್ನು ಕೊಂಡುಕೊಳ್ಳಲು ಹಣವನ್ನು ಸ್ವೀಕರಿಸುತ್ತಿದ್ದರು. ನಾವು ಆ ವಾಗ್ದಾನವನ್ನು ಕೈಕೊಂಡೆವು "ಇನ್ನು ಸ್ವಲ್ಪ ಸಮಯದ ನಂತರ ನಾವು ಅಂಗಡಿಗೆ ಹೋಗಿ, ನಿಮಗೆ ಬೇಕಾದದ್ದನ್ನು ಕೊಂಡು ಕೊಳ್ಳುವೆವು." ನಿರೀಕ್ಷೆಯಲ್ಲಿದ್ದ ಆ ಮಕ್ಕಳಿಗೆ ಸಮಯವು ಮೆಲ್ಲಗೆ ಚಲಿಸುತ್ತಿತ್ತು. ಪ್ರತೀ ಒಂದು ಅಥವಾ ಎರಡು ನಿಮಿಷಕ್ಕೆ ಅವರು, "ಹೋಗಲು ಈಗ ಸಮಯವಾಗಿದೆಯೇ? ನಾವು ಈಗ ಹೋಗುತ್ತೇವೆಯೇ?" ಎಂದು ಅವರು ಕೇಳುವಂತಿತ್ತು. ನಾವು ಅದಕ್ಕೆ "ಇಲ್ಲ, ಈಗಲೇ ಅಲ್ಲ. ಇನ್ನು ಕೆಲವೇ ನಿಮಿಷಗಳಲ್ಲಿ ನಾವು ಹೋಗುವೆವು" ಎಂದು ಹೇಳುವೆವು. "ಸಮಯವು ಹತ್ತಿರವಾಗಿದೆ" ಎಂಬ ಮಾತನ್ನು ಅರ್ಥಮಾಡಕೊಳ್ಳಲು ಕಠಿಣ ಸಮಯವಾಗಿತ್ತು. ಅವರು ಕಾದುಕೊಂಡಿರಲಾರರು - ಅವರಿಗೆ ಜೀವಿತವು ಯಾವಾಲೂ *ಈಗ* ಜೀವಿಸಲ್ಪಡುವುದು, ಕೆಲವು ಸಲ, "ನಾವು ಯಾವಾಗ ಹೋಗು ವೆವೆಂಬುದರ ಬಗ್ಗೆ ಇನ್ನು ಮೇಲೆ ಕೇಳಬೇಡ. ಹೋಗುವ ಸಮಯ ಯಾವಾಗ ಎಂಬುದನ್ನು ನಾನು ಹೇಳುತ್ತೇನೆ" ಎಂದು ಹೇಳಬೇಕಾಗುತ್ತದೆ.

ಯೋಹಾನನಿಂದ ಮತ್ತು ಯೇಸುವಿನಿಂದ ಉಪಯೋಗಿಸಲ್ಪಟ್ಟ "ಹತ್ತಿರವಾಗಿದೆ" ಎಂಬ ಮಾತು ಮತ್ತು "ಸಮೀಪ" ಎಂಬ ಪದವು ರಾಜ್ಯವು ಭವಿಷ್ಯದಲ್ಲಿ ಯಾವಾಗ ಬರುವುದು ಎಂಬುದನ್ನು ಸೂಚಿಸುತ್ತದೆ ಮತ್ತು ರಾಜ್ಯವು ಯಾವಾಗ ಇರುವುದಿಲ್ಲ ಎಂಬುದನ್ನು ಅನ್ವಯಿಸುತ್ತದೆ. ಅವುಗಳ ಮೇಲೆ ಅವಲಂಭಿಸಿ, ಪರಲೋಕ ರಾಜ್ಯವು ಬೇಗನೇ ಬರಲಿದೆ ಎಂದು ಯೋಹಾನ ಮತ್ತು ಯೇಸುವು ಪ್ರಸಂಗಿಸುತ್ತಿದ್ದ ದಿನಗಳಲ್ಲಿ ರಾಜ್ಯವು ಬಂದಿರುವುದಕ್ಕಾಗಿ ನಾವು ಹುಡುಕಬಾರದು, ಆದರೆ ನಾವು ಯೋಗ್ಯವಾಗಿ ರಾಜ್ಯವು ಯೇಸುವಿನ ಸೇವೆಯ ಅಂತ್ಯದಲ್ಲಿ ಇಲ್ಲವೇ ಅದರ ನಂತರ ಸ್ವಲ್ಪ ಸಮಯದಲ್ಲಿ ಬಂದಿತೆಂದು ನಿರೀಕ್ಷಿಸಬೇಕು.

## ಬಲದೊಂದಿಗೆ ಬರುವುದು

ದೇವರ ರಾಜ್ಯವು ದೈವಿಕ ಬಲದೊಂದಿಗೆ, ದೊಡ್ಡ ಶಕ್ತಿಯೊಂದಿಗೆ ಬರುವುದು

ಎಂದು ಯೇಸುವು ಸಾರಿದನು. "... ನಿಮಗೆ ನಿಜವಾಗಿ ಹೇಳುತ್ತೇನೆ, ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವು ಪ್ರಬಲವಾಗಿ ಬಂದಿರುವುದನ್ನು ನೋಡುವ ತನಕ ಮರಣ ಹೊಂದುವುದಿಲ್ಲವೆಂದು ಹೇಳಿದನು" ಎಂದು ಮಾರ್ಕ 9:1 ಹೇಳುತ್ತದೆ.

ಯೇಸುವು ಈ ವಾಕ್ಯಭಾಗದಲ್ಲಿ ದೇವರ ರಾಜ್ಯವು, ಆತನು ಮಾತಾಡುತ್ತಿದ್ದಾಗ ಹಾಜರಿದ್ದವರ ಜೀವನಕಾಲದಲ್ಲಿ ಬಲದೊಂದಿಗೆ ಎಂದು ಪ್ರಕಟಿಸಿದನು. ನಮ್ಮ ಕರ್ತನ ಪ್ರವಾದನೆಯು ಮೂರು ತೀರ್ಮಾಣಗಳನ್ನು ಮಾಡುವ ಅವಶ್ಯಕತೆಯುಳ್ಳದ್ದಾಗಿದೆ: (1) ಆತನ ಮಾತನ್ನು ಕೇಳುತ್ತಿದ್ದವರ ಜೀವಮಾನಕಾಲದೊಳಗಾಗಿ ರಾಜ್ಯವು ಬರುವುದು. (2) ಆತನ ಶ್ರೋತೃಗಳಲ್ಲಿ ಪ್ರತಿಯೊಬ್ಬರೂ ದೇವರ ರಾಜ್ಯವು ಬರುವವರೆಗೆ ಜೀವಿಸಿರುವುದಿಲ್ಲ. (3) ದೇವರ ರಾಜ್ಯವು ಬರುವುದನ್ನು ಗುರುತಿಸುವ ಗುರುತುಗಳಲ್ಲಿ ಒಂದು, ಅದು ದೈವಿಕ ಬಲದೊಂದಿಗೆ ಬರುವುದಾಗಿರುವುದು.

ಅನುದಿನದ ಜೀವಿತದಲ್ಲಿ ನಾವೆಲ್ಲರೂ ಗುರುತಿಸುವ ಗುರುತುಗಳನ್ನು ಉಪಯೋಗಿಸುವೆವು. ಉದಾಹರಣೆಗಾಗಿ, ಒಬ್ಬನು ಇನ್ನೊಬ್ಬ ವ್ಯಕ್ತಿಯಿಂದ ಒಂದು ಕೆಲಸಕ್ಕಾಗಿ ಕಳುಹಿಸಲ್ಪಡುವಾಗ ಅವು ಕೈಗೆಟಕುವಂತಿರುವವು. ನನ್ನ ಹೆಂಡತಿಯು ತನಗೆ ಬೇಕಾಗುವ ಬ್ರೆಡ್ಡಿನ ಬಗ್ಗೆ ಸ್ಪಷ್ಟವಾಗಿ ಹೇಳದೇ ಬ್ರೆಡ್ಡನ್ನು ತರಲು ಕಿರಾಣಿ ಅಂಗಡಿಗೆ ನನ್ನನ್ನು ಕಳುಹಿಸುವುದು ಗಂಡಾಂತರಕರವಾಗಿದೆಯೆಂದು ತಿಳಿದಿರುವಳು. ನಾನು ಕಿರಾಣಿ ಅಂಗಡಿಗೆ ಹೋಗುವಾಗ ಸಮಾನ್ಯವಾಗಿ ನನ್ನ ಮನಸ್ಸಿನಲ್ಲಿ ಒಂದು ಪ್ರಸಂಗವನ್ನು ಕಲ್ಪಿಸುತ್ತಿರುವೆನೆಂದು ತಿಳಿದು, ಆಕೆ ಬ್ರೆಡ್ಡಿನ ಹೆಸರನ್ನೂ ಅದರ ಗುರುತನ್ನೂ ನನಗೆ ಹೇಳುತ್ತಾಳೆ. "ಕೊಲೊನಿಯಲ್ ಗೋಧಿ ಬ್ರೆಡ್ಡನ್ನು ಕೊಂಡುಕೊಳ್ಳಿರಿ" ಎಂದು ಆಕೆ ನನಗೆ ಹೇಳಬಹುದು. ಪ್ರತ್ಯೇಕವಾದ ಗುಣಲಕ್ಷಣಗಳಿಲ್ಲದಿದ್ದರೆ, ನಾನು ತಪ್ಪಾದ ಬ್ರೆಡ್ಡನ್ನು ತೆಗೆಕೊಳ್ಳಬಹುದೆಂದು ಆಕೆ ತಿಳಿದಿರುವಳು.

ರಾಜ್ಯದ ಸ್ಥಾಪನೆಗಾಗಿ ಗುರುತಿಸುವ ಗುರುತುಗಳು ಸುವಾರ್ತೆಗಳಲ್ಲಿ ಕಾಣಲು ಪ್ರಾರಂಭಿಸುತ್ತವೆ. ಯೋಹಾನನ ಮತ್ತು ಯೇಸುವಿನ ಪ್ರಸಂಗಿಸುವಿಕೆಯಿಂದ ದೇವರ ರಾಜ್ಯವು "ಸಮೀಪದಲ್ಲಿದೆ" ಎಂದು ನಾವು ತಿಳಿಯುತ್ತೇವೆ. ಇದರ ಅರ್ಥ ಅದರ ಬರೋಣವು ಯೇಸುವಿನ ಸೇವೆಯ ಅಂತ್ಯಕ್ಕೆ ಇಲ್ಲವೇ ಅದರ ನಂತರ ಸಮೀಪದಲ್ಲಿಯೇ ಅದರ ಬರೋಣವನ್ನು ಕಂಡುಕೊಳ್ಳಬಹುದು ಎಂದಾಗುತ್ತದೆ ಮಾರ್ಕ 9:1ರಲ್ಲಿ ಯೇಸುವು ಮಾತಾಡುವುದನ್ನು ಕೇಳಿಸಿಕೊಳ್ಳುತ್ತಿರುವವರಲ್ಲಿ ಕೆಲವರ ಜೀವನ ಸಮಯದಲ್ಲಿ ರಾಜ್ಯವು ಬಲವಾಗಿ ಬರಲಿಕ್ಕಿದೆ ಎಂಬುದನ್ನೂ ತಿಳಿದುಕೊಂಡಿದ್ದೇವೆ. ಅದು ಬೇಗನೇ ಬರಲಿಕ್ಕಿತ್ತು ಮತ್ತು ಅದರ ಬರೋಣವು ದೈವಿಕ ಬಲದೊಂದಿಗೆ ಸ್ವಲಿಖಿತವಾಗಿರುವುದು.

## ಆತ್ಮನೊಂದಿಗೆ ಬರುವುದು

ಆತ್ಮನು ಬಂದಾಗ ರಾಜ್ಯವು ಬರುವುದೆಂದು ಯೇಸುವು ತನ್ನ ಬೋಧನೆಗಳಲ್ಲಿ ಹೇಳಿದನು. ತನ್ನ ಪರಲೋಕಾರೋಹಣದ ಸ್ವಲ್ಪ ಮೊದಲು, ಆತನು ತನ್ನ ಅಪೊಸ್ತಲರಿಗೆ, "ಪರಿಶುದ್ಧಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದುವಿರಿ ..." ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 1:8). ರಾಜ್ಯದ ಬರೋಣವು ಪರಿಶುದ್ಧಾತ್ಮನ ಅದ್ಭುತಕರವಾದ ಕೊಡುವಿಕೆಯಿಂದ ವೈಶಿಷ್ಟ್ಯತೆಯುಳ್ಳದ್ದಾಗಿರುವದೆಂದು ಬೇರೆ ಮಾತಿನಲ್ಲಿ ಹೇಳಬಹುದು.

ಯೇಸುವು ಈ ಮೊದಲು, ತನ್ನೊಂದಿಗೆ ನಿಂತುಕೊಂಡಿರುವುದರಲ್ಲಿ ಕೆಲವರು

ದೇವರ ರಾಜ್ಯವು ಬಲದೊಂದಿಗೆ ಬರುವುದನ್ನು ನೋಡುವರು ಎಂದು ಹೇಳಿದ್ದನ್ನು ಜ್ಞಾಪಿಸಿಕೊಳ್ಳಿರಿ (ಮಾರ್ಕ 9:1). ಅಪೊಸ್ತಲರ ಕೃತ್ಯಗಳು 1:8ರಲ್ಲಿ ಆತನು ತನ್ನ ಅಪೊಸ್ತಲರಿಗೆ ಅವನ ಮೇಲೆ ಪರಿಶುದ್ಧಾತ್ಮನು ಬಂದಾಗ ಅವರು ಬಲವನ್ನು ಸ್ವೀಕರಿಸುವರು ಎಂದು ಹೇಳಿದನು. ಇದಲ್ಲದೆ ಅಪೊಸ್ತಲರ ಮೇಲೆ ಪರಿಶುದ್ಧಾತ್ಮನ ಬರುವಿಕೆಯನ್ನು ಯೇಸುವು ಪರಿಶುದ್ಧಾತ್ಮನ ಬಾಪ್ತಿಸ್ಮ ಎಂದು ಗುರುತಿಸಿದನು. ಯೇಸುವು ತನ್ನ ಅಪೊಸ್ತಲರೊಂದಿಗೆ ಕಳೆದ ಕೊನೆಯ ದಿನಗಳ ಬಗ್ಗೆ ಲೂಕನು ಬರೆದನು:

> ಹೀಗಿರಲಾಗಿ ಆತನು ಅವರೊಂದಿಗೆ ಕೂಡಿದ್ದಾಗ್ಗೆ ಅವರಿಗೆ - ಯೋಹಾನನಂತೂ ನೀರಿನಲ್ಲಿ ಬಾಪ್ತಿಸ್ಮ ಮಾಡಿಸಿದನು, ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪರಿಶುದ್ಧಾತ್ಮದಲ್ಲಿ ಬಾಪ್ತಿಸ್ಮವಾಗುವದು. ಆದಕಾರಣ ನೀವು ಯೆರೂಸಲೇಮನ್ನು ಬಿಟ್ಟು ಹೋಗದೆ ತಂದೆ ಮಾಡಿದಂಥ ನೀವು ನನ್ನಿಂದ ಕೇಳಿದಂಥ ವಾಗ್ದಾನಕ್ಕೆ ಕಾದುಕೊಂಡಿರ್ರಿ ಎಂದು ಅಪ್ಪಣೆಕೊಟ್ಟನು.
>
> ಕೂಡಿಬಂದವರು ಆತನನ್ನು - ಸ್ವಾಮೀ, ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರಿಗಿ ಸ್ಥಾಪಿಸಿಕೊಡುವಿಯೋ? ಎಂದು ಕೇಳಲು ಆತನು ಅವರಿಗೆ - ತಂದೆಯು ಸ್ವಂತ ಅಧಿಕಾರದಲ್ಲಿಟ್ಟು ಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳುಕೊಳ್ಳುವದು ನಿಮ್ಮ ಕೆಲಸವಲ್ಲ. ಆದರೆ ಪರಿಶುದ್ಧಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು (ಅಪೊಸ್ತಲರ ಕೃತ್ಯಗಳು 1:4-8).

ಇನ್ನೊಂದು ಸಂದರ್ಭದಲ್ಲಿ ಯೇಸು ಅವರಿಗೆ ಹೇಳಿದ್ದನ್ನು ಲೂಕನು ದಾಖಲೆ ಮಾಡಿದ್ದಾನೆ, "ಇವುಗಳ ವಿಷಯದಲ್ಲಿ ನೀವೇ ಸಾಕ್ಷಿ ಹೇಳುವವರಾಗಿದ್ದೀರಿ. ಇಗೋ ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೆ ಕಾದುಕೊಂಡಿರ್ರಿ" (ಲೂಕ 24:48, 49).

ಶಿಕ್ಷಣ ತಜ್ಞರು "ಪುನರಾವರ್ತನೆಯು ಕಲಿಯುವಿಕೆಯ ನಿಯಮವಾಗಿದೆ" ಎಂದು ಪ್ರತಿಪಾದಿಸುತ್ತಾರೆ, "ಒಂದು ವಿಷಯದಲ್ಲಿಯ ಸಂಗತಿಳನ್ನು ನಿರ್ಣಯಿಸುವುದು ಸ್ಪಷ್ಟತೆಯ ನಿಯಮ" ಎಂದೂ ಹೇಳಲ್ಪಡುತ್ತದೆ. ದೇವರ ರಾಜ್ಯವು ಬರುವುದನ್ನು ಕುರಿತು ನಾವು ನೋಡಿದ ಸಂಗತಿಗಳನ್ನು ಜಾಗರೂಕತೆಯಿಂದ ಅಳೆಯೋಣ: (1) ಯೇಸುವಿನ ಸೇವೆಯ ಪ್ರಾರಂಭದ ಭಾಗದಲ್ಲಿ ದೇವರ ರಾಜ್ಯವು "ಹತ್ತಿರವಾಗಿತ್ತು," (2) ದೇವರ ರಾಜ್ಯವು ಯೇಸುವಿನ ಸೇವೆಯ ಅನಂತರದ ಭಾಗದಲ್ಲಿ ಆತನ ಮಾತುಗಳನ್ನು ಕೇಳುತ್ತಿದ್ದವರಲ್ಲಿ ಕೆಲವರ ಜೀವನದ ಸಮಯದೊಳಗೆ ಬರುವುದು. (3) ದೇವರ ರಾಜ್ಯವು ಬಲದೊಂದಿಗೆ ಬರುವುದು. (4) ಪರಿಶುದ್ಧಾತ್ಮನು ಅಪೊಸ್ತಲರ ಮೇಲೆ ಬರುವಾಗ ಬಲವು ಬರುವುದು. (5) ಯೇಸುವು ತನ್ನ ಅಪೊಸ್ತಲರೊಂದಿಗೆ ಮಾತಾಡಿದಾಗ, ಬಹುಶಃ ಕೊನೆಯ ಸಲ, ಕೆಲವೇ ದಿನಗಳಲ್ಲಿ ಅವರು ಪರಿಶುದ್ಧಾತ್ಮನ ಬಾಪ್ತಿಸ್ಮ ಹೊಂದುವರೆಂದು ಹೇಳಿದನು. (6) ಪರಿಶುದ್ಧಾತ್ಮನ ಬರೋಣಕ್ಕಾಗಿ ಇಲ್ಲವೇ ಬಲದ ಆಗಮನಕ್ಕಾಗಿ ಅಪೊಸ್ತಲರು ಯೆರೂಸಲೇಮಿನಲ್ಲಿ ಕಾದುಕೊಂಡಿರಬೇಕಾಗಿತ್ತು. ಯೇಸುವು ತನ್ನ ಶಿಷ್ಯರಿಗೆ ಈ ಎಲ್ಲಾ ಸಂಗತಿಗಳಲ್ಲಿ, ದೇವರ ರಾಜ್ಯವು ಬರುವಾಗ, ಅವರು ಅದನ್ನು ತಿಳಿದುಕೊಳ್ಳುವರು ಎಂದು ಹೇಳಿದನು, ಯಾಕಂದರೆ ಅದರ ಬರೋ

ಣವು ಈ ಎಲ್ಲಾ ವಿಶೇಷ ಲಕ್ಷಣಗಳಿಂದ ಗುರುತಿಸಲ್ಪಡುವುದು.

"ಸಮಯದ ಅಂತ್ಯವು ಯಾವಾಗ ಸಂಭವಿಸುತ್ತದೆ ಎಂಬುದನ್ನು ನೀನು ಹೇಗೆ ತಿಳಿದುಕೊಳ್ಳುವಿ?" ಎಂದು ಕೇಳುವವನಿಗೆ ನಾವು ಕೊಡಬಹುದಾದ ಉತ್ತರವು ಇದಾಗಿದೆ, ಯೇಸುವಿನ ಹಿಂದಿರುಗಿ ಬರೋಣದೊಂದಿಗೆ ಅಂತ್ಯವು ಬರುವುದೆಂದು ಹೊಸ ಒಡಂಬಡಿಕೆ ಹೇಳುತ್ತದೆ ಎಂದು ನಾವು ಅವರಿಗೆ ಹೇಳಬಹುದು. ಕ್ರೈಸ್ತ ಯುಗದ ಅಂತ್ಯದಲ್ಲಿ ಯೇಸುವಿನ ಕಂಡುಕೊಳ್ಳುವಿಕೆಯು ಬೆಂಕಿಯ ಮೋಡಗಳಿಂದ (2 ಥೆಸಲೊನೀಕ 1:7-9; ಪ್ರಕಟನೆ 1:7), ದೇವದೂತರ ಸಮೂಹದೊಂದಿಗೆ (ಮತ್ತಾಯ 25:31), ಮತ್ತು ಆತನ ಬರೋಣವನ್ನು ಪ್ರತಿಯೊಂದು ಕಣ್ಣು ನೋಡುತ್ತಿರುವದರೊಂದಿಗೆ (ಪ್ರಕಟನೆ 1:7) ಇರುವುದು. ಹಾಗಾದರೆ, ನಿಶ್ಚಿತವಾಗಿರಲು, ಆತನು ಯಾವಾಗ ಬರುವನು ಎಂಬುದನ್ನು ನೀವು ತಿಳಿಯುವಿರಿ. ಅಂತ್ಯವು ಯಾವಾಗ ಬರುತ್ತದೆ ಎಂಬುದನ್ನು ನಿನಗೆ ಹೇಳಲಿಕ್ಕೆ ಯಾರ ಅಗತ್ಯವೂ ನಿನಗಿರುವುದಿಲ್ಲ! ಅದರಂತೆಯೇ, ಯೇಸುವು ತನ್ನ ಶಿಷ್ಯರಿಗೆ ದೇವರ ರಾಜ್ಯವು ಇಲ್ಲವೇ ಸಭೆಯು ಬೇಗನೇ ಬರುವುದು ಮತ್ತು ಪರಿಶುದ್ಧಾತ್ಮನ ಬರುವಿಕೆ ಮತ್ತು ಬಲದೊಂದಿಗೆ ಸ್ಥಾಪಿಸಲ್ಪಡುವುದೆಂದು ಹೇಳಿದನು. ಅದು ಬಂದಾಗ, ಅವರು ಸುಲಭವಾಗಿ ಅದನ್ನು ಗುರುತಿಸುವರು ಮತ್ತು ಅದರ ಬಗ್ಗೆ ಸಂಪೂರ್ಣವಾಗಿ ಅರುಹು ಉಳ್ಳವರಾಗಿರುವರು.

## ಮುಕ್ತಾಯ

ಯೇಸುವಿನ ಈ ಮುಂತಿಳಿಸುವಿಕೆಗಳು ಯಾವಾಗ ನೆರವೇರಿದವು? ದೇವರ ರಾಜ್ಯವು ಯಾವಾಗ ಬಂದಿತು?

ಈ ಎಲ್ಲಾ ಪ್ರವಾದನೆಗಳು ಕ್ರಿಸ್ತನ ಪುನರುತ್ಥಾನದ ನಂತರದ ಮೊದಲನೆಯ ಪಂಚಾಶತ್ತಮದ ದಿನದಂದು ನೆರವೇರಲ್ಪಡಲಿಲ್ಲವೇ? ಪಂಚಾಶತ್ತಮದ ದಿನವು ಬಂದಿರಲಾಗಿ, ಅಪೊಸ್ತಲರ ಮೇಲೆ ಪರಿಶುದ್ಧಾತ್ಮನು ಸುರಿಸಲ್ಪಟ್ಟನು (ಅಪೊಸ್ತಲರ ಕೃತ್ಯಗಳು 2:1-4). ಈ ಸುರಿಸುವಿಕೆಯೊಂದಿಗೆ ಅಪೊಸ್ತಲರು ರೋಮನ್ ಜಗತ್ತಿನಲ್ಲೆಲ್ಲಾ ಉತ್ಥಾನವಾದ ಕ್ರಿಸ್ತನ ಸಾಕ್ಷಿಗಳಾಗಿರಲು ಬಲಹೊಂದಿದರು. ಅಲ್ಲಿ ಕೂಡಿಬಂದಿದ್ದ ಜನಸಮೂಹಕ್ಕೆ ಪೇತ್ರನು ಪ್ರಮುಖ ಪ್ರಸಂಗವನ್ನು ಮಾಡಿದಾಗ, ಪರಿಶುದ್ಧಾತ್ಮನ ಸುರಿಸುವಿಕೆಯನ್ನು ಯೋವೇಲನ ಪ್ರವಾದನೆಯ ನೆರವೇರುವಿಕೆಯಂತೆ ಗುರುತಿಸಿದನು (ಯೋವೇಲ 2:28-32; ಅಪೊಸ್ತಲರ ಕೃತ್ಯಗಳು 2:16), ಅದು ಪರಿಶುದ್ಧಾತ್ಮನ ಸುರಿಸುವಿಕೆಯನ್ನು "ಅಂತಿಮ ದಿನಗಳ" ಪ್ರಾರಂಭದೊಂದಿಗೆ ಸಮನಾಗಿ ಮಾಡಲ್ಪಟ್ಟಿತು. ಕ್ರಿಸ್ತನು ಆ ಸಮಯದಲ್ಲಿ ದೇವರ ಬಲಗಡೆಯಲ್ಲಿ ಆಸೀನನಾಗಿರುವನೆಂದೂ, ಕರ್ತನೂ ಮತ್ತು ಕ್ರಿಸ್ತನೂ ಆಗಿ ಆಳುತ್ತಿರುವನೆಂದೂ, ಎಬ್ಬಿಸಲ್ಪಟ್ಟು ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟವನಾಗಿರುವನೆಂದೂ ಪೇತ್ರನು ಪ್ರಸಂಗಿಸಿದನು, "ಆತನು ದೇವರ ಬಲಗೈಯಿಂದ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪರಿಶುದ್ಧಾತ್ಮ ವರವನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳುವದನ್ನು ಸುರಿಸಿದ್ದಾನೆ" ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 2:33). ಪೇತ್ರನ ಪ್ರಸಂಗಕ್ಕೆ ಉತ್ತರವಾಗಿ, ಮೂರು ಸಾವಿರ ಜನರು ನಂಬಿಕೆ, ಮಾನಸಾಂತರ ಮತ್ತು ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮದ ಮುಖಾಂತರ ಕರ್ತನಿಗೆ ವಿಧೇಯರಾದರು ಮತ್ತು ಸಭೆಗೆ ಕೂಡಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:41). ಈ ಪರಿಶುದ್ಧಾತ್ಮನ ಬರುವಿಕೆಯು ನಮ್ಮ ಕರ್ತನು ಪರಲೋಕಕ್ಕೆ ಹಿಂದಿರುಗಿದ ಕೇವಲ ಹತ್ತು ದಿನಗಳ ನಂತರ ಆಯಿತು (ಅಪೊಸ್ತಲರ ಕೃತ್ಯಗಳು 1:3; 2:1) ಮತ್ತು ಹೀಗೆ ತನ್ನ ದಿವಾರೋಹಣದ

ನಂತರ ಕೆಲವೇ ದಿನಗಳಲ್ಲಿ ಅಪೊಸ್ತಲರು ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಹೊಂದುವರೆಂದು ಮಾಡಿದ ಆತನ ವಾಗ್ದಾನಕ್ಕೆ ಸಾಮರಸ್ಯದಲ್ಲಿತು (ಅಪೊಸ್ತಲರ ಕೃತ್ಯಗಳ 1:5). ಇದಲ್ಲದೇ, ಪರಿಶುದ್ಧಾತ್ಮನ ಬರುವಿಕೆಯು ಯೋಹಾನ ಮತ್ತು ಯೇಸುವು ದೇವರ ರಾಜ್ಯವು ಹತ್ತಿರವಾಗಿದೆ ಇಲ್ಲವೇ ಸಮೀಪದಲ್ಲಿದೆ ಎಂದು ಪ್ರಸಂಗಿಸಿದಾಗ ಕಾಲಕ್ರಮವನ್ನು ಹೊಂದಿಕೊಳ್ಳುತ್ತದೆ (ಮತ್ತಾಯ 3:1; 4:17).

ಕ್ರಿಸ್ತನ ಪುನರುತ್ಥಾನದ ನಂತರದ ಈ ಪಂಚಾಶತ್ತಮ ದಿನವು, ಪ್ರಶ್ನೆಯಿಲ್ಲದೆ ರಾಜ್ಯದ ಬರುವಿಕೆಯ ದಿನವಾಗಿ ನಿಲ್ಲುತ್ತದೆ. ಇದು ಮಾನವ ಚರಿತ್ರೆಯಲ್ಲಿ ಕರ್ತನು ತನ್ನ ಸಭೆಯನ್ನು ಸ್ಥಾಪಿಸಿದ ಸಂಧಿಕಾಲವಾಗಿದೆ, “ಸಭೆ” ಮತ್ತು “ರಾಜ್ಯ” ಎಂಬ ಪದಗಳು ಕ್ರಿಸ್ತನ ಇಂದನ ಆಳ್ವಿಕೆಯ ಭಿನ್ನವಾದ ದೃಷ್ಟಿಕೋನಗಳಿಗೆ ಸಂಬಂಧಿಸಲ್ಪಟ್ಟರೂ, ಅವು ಎರಡೂ ದೇವರ ಮತ್ತು ಕ್ರಿಸ್ತನ ಒಂದೇ ಮೂಲ ಸಂಬಂಧಕ್ಕೆ ಉಲ್ಲೇಖಿಸುತ್ತವೆ. ಸಭೆಯು ಕರ್ತನ ನಿತ್ಯ ರಾಜ್ಯವಾಗಿದೆ.

ಕ್ರೈಸ್ತ ಯುಗದಲ್ಲಿ ಜೀವಿಸುತ್ತಿರುವುದು ಎಂಥಾ ಅದೃಷ್ಟವಾಗಿದೆ! ಈ ಯುಗವು ಒಂದು “ರಾಜ್ಯವು ಬರಲಿ” ಯುಗವಾಗಿರುವುದಿಲ್ಲ, ಪ್ರವಾದಿಗಳು ಮತ್ತು ಕ್ರಿಸ್ತನ ಸೇವೆಯ ಕಾಲದಲ್ಲಿದ್ದ ಜನರು ಮಾಡಿದಂತೆ ಒಂದು ದಿನ ರಾಜ್ಯವು ಕಾಣಿಸಿಕೊಳ್ಳುವುದನ್ನು ನಿರೀಕ್ಷಿಸುವಂದದ್ದೂ ಆಗಿರುವುದಿಲ್ಲ; ಅದು “ರಾಜ್ಯವು ಬಂದಿರುವ” ಯುಗವಾಗಿದೆ, ರಾಜ್ಯವು ಇಲ್ಲಿದೆ, ನಾವು ಅದರ ಪ್ರಜೆಗಳಾಗಿ ಜೀವಿಸಬಹುದು, ಕ್ರಿಸ್ತನ ಮರಣ ಮತ್ತು ಆ ರಾಜ್ಯದ ಸ್ಥಾಪನೆಯು ಒದಗಿಸುವ ಎಲ್ಲಾ ದೈವಿಕ ಆಶೀರ್ವಾದಗಳಲ್ಲಿ ಪಾಲುಹೊಂದ ಬಹುದು.

ಮಾನವ ಅತಿ ದೊಡ್ಡ ದುಃಖಕರವಾದ ಸಂಗತಿಯು ಕಡೆಗಣಿಸಿದ ಅವಕಾಶದ ದುಃಖಕರವಾದ ಸಂಗತಿಯೆಂದು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಅದು ಮುಖ್ಯ ಭಾಗಗಳ ತಪ್ಪಾಗಿರುತ್ತದೆ ಯಾಕಂದರೆ ಅದು ಯಾವುದು ಸುಲಭವಾಗಿರಬಹುದಿತ್ತು ಎಂಬುದನ್ನು ವಿವರಿಸುತ್ತದೆ, ಆದರೆ ಅದು ಪರಿತ್ಯಾಗದ ಕಾರಣದಿಂದ ಸಂಭವಿಸಲಿಲ್ಲ. ನಿಶ್ಚಯವಾಗಿಯೂ, ಒಬ್ಬ ವ್ಯಕ್ತಿಯು ಈ ಯುಗದಲ್ಲಿ ಜೀವಿಸಿ, ದೇವರ ರಾಜ್ಯದ ಯುಗದಲ್ಲಿ ಜೀವಿಸಿ, ಆದರೆ ದೇವರ ರಾಜ್ಯವನ್ನು ಪ್ರವೇಶಿಸುವುದನ್ನು ಮತ್ತು ಅದರ ಪ್ರಜೆಯಾಗಿ ಜೀವಿಸುವುದನ್ನು ಕಡೆಗಣಿಸುವುದು ತಿಳಿಯಲ್ಪಟ್ಟ ಯಾವುದೇ ತಪ್ಪು ಮಾಡುವಿಕೆಗಿಂತ ಹೆಚ್ಚು ದೊಡ್ಡದಾಗಿರುವುದು.

ದಕ್ಷಣ ಆಫ್ರಿಕಾದಲ್ಲಿಯ ಬಾಲಕರ ಒಂದು ಗುಂಪು ಚಿಕ್ಕ, ದುಂಡನೆಯ ಮತ್ತು ಕಪ್ಪು - ಬಣ್ಣದ ಕಲ್ಲುಗಳಿಂದ ಮಾರ್ಬಲ್ಸ್ ಆಡುತ್ತಿದ್ದರು. ಅವುಗಳನ್ನು ಪರೀಕ್ಷಿಸಲಾಗಿ ಅವು ಕೆತ್ತಲ್ಪಡದ ಡೈಮೆಂಡ್ಸ್ ಆಗಿದ್ದವೆಂದು ಒಬ್ಬರು ಕಂಡು ಹಿಡಿದರು, ಅದನ್ನು ಯೋಚಿಸಿರಿ! ಅವರು ವಜ್ರಗಳನ್ನು ಮಾರ್ಬಲ್‌ಗಳಂತೆ ಉಪಯೋಗಿಸುತ್ತಿದ್ದರು - ಅದೃಷ್ಟದೊಂದಿಗೆ ಮಕ್ಕಳ ಆಟ ಆಡುತ್ತಿದ್ದರು!

ನಾವು ಹತ್ತಿರದಿಂದ ನೋಡಿದರೆ, ಈ ಚಿತ್ರದಲ್ಲಿ ನಮ್ಮನ್ನು ನಾವೇ ನೋಡ ಬಹುದು. ಮಾರ್ಬಲ್‌ಗಳ ಆಟದಲ್ಲಿ ಆಳವಾಗಿ ಮುಳುಗಿದ ಬಾಲಕರಂತೆ ನಾವು ಎಲ್ಲಾ ರೀತಿಯ ಚಟುವಟಿಕೆಗಳಿಂದಲೂ, ಪೂರ್ಣ ಕಾರ್ಯ ಕ್ರಮಗಳಿಂದಲೂ ಕರ್ತವ್ಯಗಳ ಒತ್ತಡದಿಂದಲೂ ಸುತ್ತುವರಿಯಲ್ಪಟ್ಟಿದ್ದೇವೆ. ಕ್ರಿಸ್ತನ ಯಜ್ಞದ ಮುಖಾಂತರ ಪರಲೋಕ ದಿಂದ ದೇವರು ಕಳುಹಿಸಿದ ಅಮೂಲ್ಯ ವಜ್ರವಾದ, ದೇವರ ರಾಜ್ಯದೊಳಗೆ ಪ್ರವೇಶಿಸುವ ಅವಕಾಶದ ಬಗ್ಗೆ ಸಂಪೂರ್ಣವಾಗಿ ಅರಹು ಇಲ್ಲದವರಾಗಿರುವವರಂತೆ ನಾವು ಕಾಣುತ್ತೇವೆ. ದೇವರ ವಜ್ರವು ನಮ್ಮ ಕೈಗೆ ಎಟಕುವ ರೀತಿಯಲ್ಲಿದೆ, ಆದರೆ ನಾವು ಮಾರ್ಬಲ್‌ಗಳ ಆಟಕ್ಕೆ ನಮ್ಮ ಪೂರ್ಣ ಯೋಚನೆಯನ್ನು ಕೊಡುವಂತೆ ನಾವು

ಕಡೆಗಣಿಸುತ್ತೇವೆ.

ಅದು ನಿನ್ನೊಂದಿಗೆ ಹೇಗಿರುವುದು? ಜೀವಿತವನ್ನು ಒಂದು ಚಿಕ್ಕ ಮಾರ್ಬಲ್ ಆಟದಂತೆ ಮಾಡುವಲ್ಲಿ ನೀನು ತೃಪ್ತನಾಗಿರುವಿಯೋ, ಇಲ್ಲವೇ ದೇವರ ರಾಜ್ಯವನ್ನು ಪ್ರವೇಶಿಸುವುದರಿಂದ ದೇವರ ಅಮೂಲ್ಯ ವಜ್ರವನ್ನು ತಲುಪಿ ಆಯ್ದುಕೊಳ್ಳುವಿಯೋ?

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಸಭೆಯನ್ನು ಕುರಿತು ಯೇಸುವು ಹೇಳಿದ ಪ್ರವಾದನೆಗಳ ಬಗ್ಗೆ ಕೆಲವು ಭಿನ್ನವಾದ ವಿಧಗಳು ಯಾವವು?
2. ಯೇಸುವು ನಮ್ಮ ಪ್ರವಾದಿಯೋ? ನಿಮ್ಮ ಉತ್ತರಕ್ಕೆ ಪುರಾವೆ ಕೊಡಿರಿ.
3. "ಸಮೀಪವಾಗಿದೆ" ಎಂಬುದರ ಅನ್ವಯಗಳನ್ನು ಚರ್ಚಿಸಿರಿ.
4. ಮಾರ್ಕ 9:1, ದೇವರ ರಾಜ್ಯದ ಬರುವಿಕೆಯ ಸಮಯಕ್ಕೆ ಹೇಗೆ ಸಂಬಂಧಿಸುತ್ತದೆ?
5. ದೇವರ ರಾಜ್ಯದ ಬರುವಿಕೆಗೆ ಮಾರ್ಕ 9:1 ಏನನ್ನು ಸೂಚಿಸುತ್ತದೆ?
6. ದೇವರ ರಾಜ್ಯದ ಬರೋಣವು ಪರಿಶುದ್ಧಾತ್ಮನ ಬರೋಣದಿಂದ ಗುರುತಿಸಲ್ಪಡ ಬೇಕೆಂದು ತೋರಿಸುವ ವಚನಗಳು ಯಾವವು?
7. "ಬಲದೊಂದಿಗೆ ಬರುವುದು" ಮತ್ತು "ಆತ್ಮದೊಂದಿಗೆ ಬರುವುದು" ಒಂದೇಯಾಗಿದೆ ಎಂದು ನೀವು ಹೇಳುವಿರೋ?
8. ನಿಶ್ಚಿತತೆಯ ನಿಯಮವು ಯಾವುದಾಗಿರುತ್ತದೆ?
9. ಯೇಸುವಿನ ಮುಂತಿಳಿಸುವಿಕೆಗಳು ಅಪೊಸ್ತಲರ ಕೃತ್ಯಗಳು 2ರಲ್ಲಿ ಪಂಚಾಶತ್ತಮದ ದಿನದಂದು ಹೇಗೆ ನೆರವೇರಿದವು ಎಂಬುದನ್ನು ಚರ್ಚಿಸಿರಿ.
10. "ಸಭೆ" ಮತ್ತು "ದೇವರ ರಾಜ್ಯ" ಎಂಬ ಎರಡು ಪದಗಳು ಒಂದೇ ಸಂಗತಿಯನ್ನು ಸೂಚಿಸುತ್ತವೆಯೋ? ನಿಮ್ಮ ಉತ್ತರವನ್ನು ವಿವರಿಸಿರಿ.
11. ಇದು "ರಾಜ್ಯವು - ಬರಲಿ" ಯುಗವಾಗಿದೆಯೋ?
12. ಇಂದು ಒಬ್ಬನು ದೇವರ ರಾಜ್ಯವನ್ನು ಹೇಗೆ ಪ್ರವೇಶಿಸುವನು?

© 2009 Truth for Today